ಪಿಡಬ್ಲ್ಯೂ-1

**ನಾಲ್ಕನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ವ ಜೆ ಎಂ ಎಫ್ ಸಿ , ಧಾರವಾಡ.**

**ಸಾಕ್ಷಿದಾರನ ಹೆಸರುಃ** **ಮುದಕಪ್ಪ**
**ತಂದೆಯ ಹೆಸರುಃ** **ಬಸಪ್ಪ ದಿವಾನ**
**ವಯಸ್ಸುಃ** **78 ವರ್ಷ**
**ಉದ್ಯೋಗಃ** **ಶೇತ್ಕಿ**
**ವಾಸಸ್ಥಳಃ** **ಹೆಬ್ಬಳ್ಳಿ**

ದಿನಾಂಕ 06.08.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಭೋದಿಸಲಾಯಿತ.

**<u>ಮುಖ್ಯ ವಿಚಾರಣೆ ಕಲಂ.244 ಸಿ ಆರ್ ಪಿಸಿ ರಡಿಯಲ್ಲಿ</u>**

ದಿಃ **21.03.2018** ರಂದು ಬೆಳಿಗ್ಗ **11.00** ರ ಸಮಯದಲ್ಲಿ ನ್ಯಾಯಾಲಯದ ಮುಂದೆ ಇರುವ ಆರೋಪಿತರು ನಮ್ಮ ಮನೆಗೆ ಅವರ ಸಾಮಾನುಗಳನ್ನು ತೆಗೆದುಕೊಂಡು ಬಂದು ನಮ್ಮ ಮನೆಯಲ್ಲಿ ಅವರಿಗೂ ಅರ್ಧ ಹಕ್ಕು ಇದೆ ಎಂದು ನನಗೆ , ನನ್ನ ಹೆಂಡತಿಗೆ ಹಾಗೂ ಮಗಳಿಗೆ ಹೊಡೆ ಬಡಿ ಮಾಡಿದರು. ನಿನ್ನನ್ನು ಕೊಂದು ಬಿಡುತ್ತೇವೆ ಎಂದು ಬೆದರಿಕೆ ಹಾಕಿರುತ್ತಾರೆ. ನಂತರ ನಾವು ಗ್ರಾಮಿಣ ಪೋಲಿಸ ಠಾಣೆಗೆ ಹೊಗಿ ದೂರನ್ನು ನೀಡಿರುತ್ತೇವೆ. ಅದರೇ ಪೋಲಿಸರು ಅವರ ಮೇಲೆ ಯಾವುದೇ ಕ್ರಮ ಕೈಗೊಳ್ಳಲಿಲ್ಲ. ನಂತರ ನಾವು ವಕೀಲರ ಮೂಲಕ ಎಸ್ ಪಿ ಅವರಿಗೆ ಹೊಗಿ ದೂರು ಕೊಟ್ಟಿರುತ್ತೇವೆ. ನಾವು ವಾಸ ಮಾಡುವ ಮನೆ ನಾವು ಮತ್ತು ಮಕ್ಕಳು ದುಡಿದು ಸ್ವಂತ ಹಣದಿಂದ ಮಾಡಿಕೊಂಡಿರುತ್ತೇವೆ. ಈ ಬಗ್ಗ ನಾನು ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ಗ್ರಾಮ ಪಂಚಾಯಿತಿ ಕಾರ್ಯಾಲಯ ಇವರು ನೀಡಿದ ದೃಡಿಕರಣ ಪತ್ರವನ್ನು ನಿಪಿ.**1** ಎಂದು , ಸಾಮಾನ್ಯ ರಶೀದಿಗಳ ದಾಖಲೆ ನಿಪಿ.**2** ರಿಂದ **4** ಎಂದು , ಪೋಲಿಸರಿಗೆ ನೀಡಿದ ದೂರಿನ ಪ್ರತಿ

**ಪಿಡಬ್ಲೂ-1**

ನಿಪಿ.**5** ಎಂದು , ಪೋಲಿಸರು ನೀಡಿದ ಹಿಂಬರಹ ನಿಪಿ.**6** ಎಂದು , ಎಸ್ ಪಿ ರವರಿಗೆ ನೀಡಿದ ದೂರು ನಿಪಿ.**7** ಎಂದು , ಅಂಚೆ ರಶೀದಿ ನಿಪಿ.**8** ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಆರೋಪಿತರ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು , ನೀಡಲಾಯಿತು.

**(ತೆರೆದ ನ್ಯಾ..ದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).**

ಓ ಹೇ ಕೇ ಸರಿ ಅದೆ,

( ಆನಂದ ಎಸ್ ಕರಿಯಮ್ಮನವರ)
4 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಧಾರವಾಡ.